## ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಡಿಟಿಇ ಸಿಡಿಸಿ(1) 2024

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ,
ಬೆಂಗಳೂರು-560001,
ದಿನಾಂಕ:01-03-2024.

## ಸುತ್ತೋಲೆ

ವಿಷಯ: ವಾದ್ವಾನಿ ಫೌಂಡೇಷನ್, ಬೆಂಗಳೂರು ಇವರಿಂದ ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಬೋಧಕರುಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ನೀಡುವ ಬಗ್ಗೆ.

ಉಲ್ಲೇಖ: ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಹಾಗೂ ವಾದ್ವಾನಿ ಫೌಂಡೇಷನ್ ನಡುವೆ ಏರ್ಪಟ್ಟ ಒಡಂಬಡಿಕೆ.

****

ಮೇಲ್ಕಂಡ ವಿಷಯದ ಬಗ್ಗೆ ಉಲ್ಲೇಖಿತ ಒಡಂಬಡಿಕೆಯ ಪ್ರಕಾರ ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗೆ ಉದ್ಯೋಗ ಕೌಶಲ್ಯಗಳಲ್ಲಿ ತರಬೇತಿ ನೀಡುವ ದೃಷ್ಟಿಯಿಂದ ಇಲಾಖೆಯು ವಾಧ್ವಾನಿ ಫೌಂಡೇಶನ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡಿರುತ್ತದೆ. ವಾಧ್ವಾನಿ ಫೌಂಡೇಶನ್ ನವೋದ್ಯಮ, ನಾವೀನ್ಯತೆ ಮತ್ತು ಕೌಶಲ್ಯಾಭಿವೃದ್ಧಿಯ ಮೂಲಕ ಬೃಹತ್ ಪ್ರಮಾಣದಲ್ಲಿ ಉದ್ಯೋಗಸೃಷ್ಟಿ ಮಾಡುವ ಉದ್ದೇಶ ಹೊಂದಿದೆ. ಈ ಫೌಂಡೇಶನ್ ಏಷಿಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾದ 15 ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಯುವಜನರ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಉಪಕ್ರಮಗಳನ್ನು ಈಗಾಗಲೇ ಕೈಗೊಂಡಿದ್ದು, ಪ್ರಸ್ತುತ ರಾಜ್ಯದ ಸರ್ಕಾರಿ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ 'ಉದ್ಯೋಗ ಕೌಶಲ್ಯ' ತರಬೇತಿಯನ್ನು ಉಚಿತವಾಗಿ ಅನುಷ್ಠಾನಗೊಳಿಸಲು ಮುಂದಾಗಿದೆ.

ತಾಂತ್ರಿಕ ಶಿಕ್ಷಣ ಇಲಾಖೆಯು ವಾಧ್ವಾನಿ ಪೌಂಡೇಶನ್ ಸಂಸ್ಥೆಯ ಸಹಭಾಗಿತ್ವದಲ್ಲಿ ರಾಜ್ಯದ 105 ಸರ್ಕಾರಿ ಪಾಲಿಟೆಕ್ನಿಕ್ ಹಾಗೂ 16 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳಿಗೆ ಒಟ್ಟು 601 ಗಂಟೆಗಳ, Artificial intelligence ಆಧಾರಿತ 'ಉದ್ಯೋಗ ಕೌಶಲ್ಯ' ತರಬೇತಿಯನ್ನು ಸರ್ಕಾರದ ಅನುಮತಿಯೊಂದಿಗೆ ಅನುಷ್ಠಾನಗೊಳಿಸಲು ಉದ್ದೇಶಿಸಿದ್ದು, ಈ ತರಬೇತಿಯಲ್ಲಿ ಉದ್ಯೋಗ ಗಳಿಸಲು ಅಗತ್ಯವಾದ ಸುಮಾರು 15 ಕೌಶಲ್ಯಗಳನ್ನು ಕಲಿಸಲಾಗುತ್ತದೆ. ಸದರಿ ಕಾರ್ಯಕ್ರಮದಲ್ಲಿ ಮೊದಲು ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಬೋಧಕರಿಗೆ

03 ದಿನಗಳ ತರಬೇತಿಯನ್ನು ನೀಡಿ, ತರಬೇತಿ ಪಡೆದ ಸಂಸ್ಥೆಯ ಉಪನ್ಯಾಸಕರ ಮೂಲಕ ವಿದ್ಯಾರ್ಥಿಗಳಿಗೆ ಸದರಿ ಕೌಶಲ್ಯಗಳಲ್ಲಿ ತರಬೇತಿ ನೀಡಲಾಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸದರಿ ತರಬೇತಿಯನ್ನು ಪರಿಣಾಮಕಾರಿಯಾಗಿ ನಡೆಸಲು ಅನುಕೂಲವಾಗುವಂತೆ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸಲು ಸೂಚಿಸಲಾಗಿದೆ:

**ಪ್ರಾಂಶುಪಾಲರ ಕರ್ತವ್ಯಗಳು:**

1. ತಮ್ಮ ಸಂಸ್ಥೆಗಳಲ್ಲಿ ಸದರಿ ಉದ್ಯೋಗ ಕೌಶಲ್ಯ ತರಬೇತಿಯ ಕುರಿತು ಭಿತ್ತಿ ಫಲಕಗಳ ಹಾಗೂ ಸುತ್ತೋಲೆಯ ಮೂಲಕ ವ್ಯಾಪಕವಾದ ಪ್ರಚಾರವನ್ನು ನೀಡತಕ್ಕದ್ದು.
2. ವಾಧ್ವಾನಿ ಫೌಂಡೇಶನ್ನಿನ 'ಕೌಶಲ್ಯ ತರಬೇತಿ' ಕಾರ್ಯಕ್ರಮದಲ್ಲಿ ತಮ್ಮ ಸಂಸ್ಥೆಯ ಬೋಧಕರಿಗೆ ಹಂತಹಂತವಾಗಿ ತರಬೇತಿ ನೀಡಲಾಗುವುದು. ಪ್ರಸ್ತುತ ಪ್ರತಿ ಸಂಸ್ಥೆಯಿಂದ ಆದ್ಯತೆಯ ಮೇರೆಗೆ ಇಂಗ್ಲೀಷ್/ಪ್ಲೇಸಮೆಂಟ್ ಆಫೀಸರ್/ಕಂಪ್ಯೂಟರ್ ಸೈನ್ಸ್ ವಿಭಾಗದ ಇಬ್ಬರು ಬೋಧಕರನ್ನು ಸದರಿ ತರಬೇತಿಗೆ ನಿಯೋಜಿಸುವುದು.
3. ತಮ್ಮ ಸಂಸ್ಥೆಗಳಲ್ಲಿ ಲಭ್ಯವಿರುವ ಕಂಪ್ಯೂಟರ್ ಲ್ಯಾಬ್, ಪ್ರೊಜೆಕ್ಟರ್ ಮತ್ತು ಇಂಟರ್‌ನೆಟ್ ಸೌಲಭ್ಯಗಳನ್ನು ವಿದ್ಯಾರ್ಥಿಗಳನ್ನು ತರಬೇತುಗೊಳಿಸುವ ಸಮಯದಲ್ಲಿ ಒದಗಿಸುವುದು.
4. ಜಂಟಿ ನಿರ್ದೇಶಕರು (ಸಿಡಿಸಿ), ತಾಂ.ಶಿ.ಇ.,ಬೆಂಗಳೂರು ಇವರಿಗೆ ಪ್ರತಿ ತಿಂಗಳು ಇ-ಮೇಲ್ (jointdirector.cdc@gmail.com) ಮುಖಾಂತರ ತರಬೇತಿ ಅನುಷ್ಠಾನ, ಪ್ರಗತಿ ಕುರಿತು ವರದಿ ನೀಡುವುದು.

**ತರಬೇತಿಗೆ ನಿಯೋಜಿಸಲ್ಪಡುವ ಬೋಧಕರ ಕರ್ತವ್ಯಗಳು:**

1. ನಿಯೋಜಿತ ತರಬೇತಿಗೆ ತಪ್ಪದೆ ಹಾಜರಾಗಿ, ಸೂಚಿತ ಕೌಶಲ್ಯಗಳನ್ನು ಕಲಿತುಕೊಳ್ಳುವುದು. ಕಾರ್ಯಾಗಾರದ ಕೊನೆಯಲ್ಲಿ ನಡೆಸಲಾಗುವ ಪರೀಕ್ಷೆಯನ್ನು ಗಂಭೀರವಾಗಿ ಪರಿಗಣಿಸಿ, ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದು.
2. ಕಾರ್ಯಾಗಾರದಿಂದ ಸಂಸ್ಥೆಗೆ ಹಿಂದಿರುಗಿದ ಬೋಧಕರು ಸಂಸ್ಥೆಯಲ್ಲಿನ ತಮ್ಮ ದೈನಂದಿನ ಕರ್ತವ್ಯಗಳಿಗೆ ಧಕ್ಕೆಯಾಗದಂತೆ, ವಿದ್ಯಾರ್ಥಿಗಳಿಗೆ ವಾಧ್ವಾನಿ ಫೌಂಡೇಶನ್ App ಅನ್ನು ಡೌನ್ ಲೋಡ್ ಮಾಡಿಕೊಂಡು, ಲಾಗಿನ್ ಆಗುವುದನ್ನು ಮತ್ತು App ಬಳಸಿ ಕೌಶಲ್ಯಗಳನ್ನು ಕಲಿತುಕೊಳ್ಳುವ ನಿಟ್ಟಿನಲ್ಲಿ ತರಬೇತಿ ಮತ್ತು ಮಾರ್ಗದರ್ಶನ ನೀಡುವುದು.
3. ತರಬೇತಿಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಂದ ಕಾಲಕಾಲಕ್ಕೆ ಹಿಮ್ಮಾಹಿತಿ (Feedback) ಪಡೆದು ಪ್ರಗತಿ ಪರಿಶೀಲನೆಯಲ್ಲಿ ಪ್ರಾಂಶುಪಾಲರಿಗೆ ನೆರವಾಗುವುದು.

**ತಾಂತ್ರಿಕ ಶಿಕ್ಷಣ ಇಲಾಖೆಯ ಕ್ರಮಗಳು:**

1. ರಾಜ್ಯದ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಸಂಸ್ಥೆಗಳಲ್ಲಿ ವಾಧ್ವಾನಿ ಫೌಂಡೇಶನ್ ಕಾರ್ಯಾಗಾರಕ್ಕೆ ಬೋಧಕರನ್ನು ನಿಯೋಜಿಸುವುದು.
2. ಬೋಧಕರು ತರಬೇತಿ ಪಡೆದಿರುವ ಹಾಗೂ ವಿದ್ಯಾರ್ಥಿಗಳಿಗೆ ಬೋಧಕರಿಂದ ತರಬೇತಿ ನೀಡುತ್ತಿರುವ ಕುರಿತು ಮೇಲ್ವಿಚಾರಣೆ ನಡೆಸುವುದು ಹಾಗೂ ಸಂಸ್ಥೆಗಳಿಂದ ವರದಿ ತರಿಸಿಕೊಂಡು ಕ್ರೋಢೀಕರಿಸುವುದು.

**ಆಯುಕ್ತರು**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಇವರಿಗೆ

ರಾಜ್ಯದ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್/ಇಂಜಿನಿಯರಿಂಗ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.

ಪ್ರತಿ:

1. ನಿರ್ದೇಶಕರು, ತಾಂ.ಶಿ.ಇ., ಬೆಂಗಳೂರು-ಮಾಹಿತಿಗಾಗಿ.
2. ಜಂಟಿ ನಿರ್ದೇಶಕರು (ಸಿಡಿಸಿ), ತಾಂ.ಶಿ.ಇ., ಬೆಂಗಳೂರು- ಅಗತ್ಯ ಕ್ರಮಕ್ಕಾಗಿ.
3. ಇ-ಆಡಳಿತ ವಿಭಾಗಕ್ಕೆ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಕಡತಕ್ಕೆ.